ಸಮಾಜ ಕಲ್ಯಾಣ ಇಲಾಖೆ ಕಾರ್ಯನಿರ್ವಹಣೆ ಕುರಿತು.

3369(4111) ಶ್ರೀ ಎ.ಎನ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ವಿವಿಧ ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ಸಾರ್ವಜನಿಕರಿಗೆ ತಲುಪಿಸಲು ಅನುವಾಗುವಂತೆ ಸಲಹಾ ಸಮಿತಿ ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

2) ಹಾಗಿದ್ದಲ್ಲಿ ಯಾವ ಯಾವ ಸಂಸ್ಥೆಗಳಿಗೆ ಸಲಹಾ ಸಮಿತಿ ರಚಿಸಲಾಗಿದೆ. ಅವುಗಳ ಪೈಕಿ ಕಾರ್ಯನಿರ್ವಹಿಸುತ್ತಿರುವ ಸಲಹಾ ಸಮಿತಿಗಳ ಸಂಖ್ಯೆ ಎಷ್ಟು ?

3) ರಾಜ್ಯ ಸಮಾಜ ಕಲ್ಯಾಣ ಸಲಹಾ ಸಮಿತಿ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

4) ಇವುಗಳಲ್ಲಿ ಖಾಸಗಿ ಅಧಿಕಾರೇತರ ಸದಸ್ಯರು ಇದ್ದಾರೆಯೇ; ಹಾಗಿದ್ದಲ್ಲಿ ಇವರ ವೇತನ ಭತ್ಯೆಗಳಿಗಾಗಿ ಖರ್ಚು ಮಾಡಲಾಗಿರುವ ಹಣ ಎಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

1) ಸರ್ಕಾರದ ಮಟ್ಟದಲ್ಲಿ ಇಂತಹ ಪ್ರಸ್ತಾವನೆ ಇರುವುದಿಲ್ಲ.

2) ಪ್ರಸ್ತುತ ಯಾವ ಸಲಹಾ ಸಮಿತಿಗಳೂ ಅಸ್ತಿತ್ವದಲ್ಲಿರುವುದಿಲ್ಲ.

3) ಪ್ರಸ್ತುತ ಸರ್ಕಾರದ ಮಟ್ಟದಲ್ಲಿ ಇಂತಹ ಪ್ರಸ್ತಾವನೆ ಇರುವುದಿಲ್ಲ,

4) ಉದ್ಭವಿಸುವುದಿಲ್ಲ.

ಮೈಸೂರು ತಾಲ್ಲೂಕಿನಲ್ಲಿ ಅನಧಿಕೃತ ಗಣಿಗಾರಿಕೆ ತಡೆಗಟ್ಟುವ ವಿಚಾರ.

3370 (4112) ಶ್ರೀ ಎ.ಎನ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ತಾಲ್ಲೂಕಿನಲ್ಲಿ ಅನೇಕ ಕಡೆ ಅನಧಿಕೃತ ಗಣಿಗಾರಿಕೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಇ) ಮೈಸೂರು ತಾಲ್ಲೂಕಿನಲ್ಲಿ ಗಣಿಗಾರಿಕೆ ಚಟುವಟಿಕೆಗಳಲ್ಲಿ ಯೋಗ್ಯ ಪ್ರದೇಶಗಳು ಎಷ್ಟು; ಇದನ್ನು ಜಾರಿಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?